ಕರ್ನಾಟಕ ಸರ್ಕಾರ

ಸಾರಿಗೆ ಇಲಾಖೆ

ಸಂಖ್ಯೆ:ಸಾಆ/ಪೀಕ-1/ವೈವ-36/2011-12

ಸಾರಿಗೆ ಆಯುಕ್ತರ ಕಛೇರಿ,
5ನೇ ಮಹಡಿ, ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:15.10.2011.

## ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

ವಿಷಯ: ಸಾರಿಗೆ ಇಲಾಖೆಯಲ್ಲಿ ಸರ್ಕಾರಿ – ಖಾಸಗಿ ಸಹಭಾಗಿತ್ವ ಯೋಜನೆಯಡಿ (ಪಿಪಿಪಿ) ಗಣಕೀಕೃತ ಸೇವೆಗಳನ್ನು ನೀಡುವ ಪದ್ಧತಿ ಜಾರಿಗೊಳಿಸುವಲ್ಲಿ ಖಾಸಗಿ ಪಾಲುದಾರರು ಒದಗಿಸಿರುವ ಮೈಕ್ರೋ ಸಾಫ್ಟ್‌ವೇರ್ ಲೈಸೆನ್ಸ್‌ಗಳ ಪರಿಶೋಧನೆಯ ಸಂಬಂಧ ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯಡಿಯ ಸಂಸ್ಥೆ (Cert-in www.cert-in.org.in) ನೋಂದಾಯಿತ ಬೆಂಗಳೂರಿನಲ್ಲಿರುವ ಭದ್ರತಾ ಪರಿಶೋಧನಾ ಸಂಸ್ಥೆಗಳಿಂದ **ಮೊಹರು ಮಾಡಿದ ದರಪಟ್ಟಿಗಳನ್ನು** ಪಡೆಯುವ ಬಗ್ಗೆ.

ಉಲ್ಲೇಖ: ಸರ್ಕಾರದ ಅದೇಶ ಸಂ: ಸಾರಿಇ 168/ಸಾಇಪ 2010 ದಿ:28-6-2011.

**************

ಸಾರಿಗೆ ಇಲಾಖೆಯಲ್ಲಿ ಸರ್ಕಾರಿ – ಖಾಸಗಿ ಸಹಭಾಗಿತ್ವ ಯೋಜನೆಯಡಿ (ಪಿಪಿಪಿ) ಗಣಕೀಕೃತ ಸೇವೆಗಳನ್ನು ನೀಡುವ ಪದ್ಧತಿ ಜಾರಿಗೊಳಿಸುವಲ್ಲಿ ಖಾಸಗಿ ಪಾಲುದಾರರು ಒದಗಿಸಿರುವ ಮೈಕ್ರೋ ಸಾಫ್ಟ್‌ವೇರ್ ಲೈಸೆನ್ಸ್‌ಗಳ ಪರಿಶೋಧನೆಯ ಸಂಬಂಧ ಕೇಂದ್ರ ಸರ್ಕಾರದ ಮಾಹಿತಿ ತಂತ್ರಜ್ಞಾನ ಇಲಾಖೆಯಡಿಯ ಸಂಸ್ಥೆ (Cert-in www.cert-in.org.in) ನೋಂದಾಯಿತ ಬೆಂಗಳೂರಿನಲ್ಲಿರುವ ಪರಿಶೋಧನಾ ಸಂಸ್ಥೆಗಳಿಂದ ಮೊಹರು ಮಾಡಿದ ದರಪಟ್ಟಿಗಳನ್ನು (Sealed tender)ಗಳನ್ನು ಆಹ್ವಾನಿಸಲಾಗಿದೆ.

ಮೊಹರು ಮಾಡಿದ ಲಕೋಟೆಯ ಮೇಲೆ **"ಸಾಫ್ಟ್‌ವೇರ್ ಲೈಸೆನ್ಸ್‌ಗಳ ಪರಿಶೋಧನೆ"** ಎಂದು ಸ್ಪಷ್ಟವಾಗಿ ನಮೂದಿಸುವುದು. ಟೆಂಡರ್ ಲಕೋಟೆಯಲ್ಲಿ ಸಂಸ್ಥೆಯ ಹೆಸರು, ವಿಳಾಸ, ಹೊಂದಿರುವ ನೋಂದಣಿ, ನಿರ್ದಿಷ್ಟ ಕ್ಷೇತ್ರದಲ್ಲಿನ ಅನುಭವ, ಹಣಕಾಸಿನ ಸಾಮರ್ಥ್ಯ ಇತ್ಯಾದಿ ವಿವರಗಳನ್ನು ಒಳಗೊಂಡಿರಬೇಕಲ್ಲದೆ ಸಾರಿಗೆ ಆಯುಕ್ತರು, ಬೆಂಗಳೂರು ಇವರ ಹೆಸರಿನಲ್ಲಿ ಪಡೆಯಲಾದ ರೂ.10,000/-ಗಳ ಮೊತ್ತದ ಬೇಡಿಕೆ ಹುಂಡಿ D.D. ಯನ್ನು ಒಳಗೊಂಡಿರಬೇಕಾಗಿರುತ್ತದೆ. ಹೀಗೆ ಮೊಹರು ಮಾಡಿದ ಟೆಂಡರ್ ಲಕೋಟೆಗಳನ್ನು ಸಾರಿಗೆ ಆಯುಕ್ತರ ಕಛೇರಿಯಲ್ಲಿ ದಿನಾಂಕ: **16.11.2011ರವರೆಗೆ** ನಿಗಧಿತ ಸಮಯ ಬೆಳಿಗ್ಗೆ 11-00 ಗಂಟೆಗೆಯಿಂದ ಸಂಜೆ 4-00 ಗಂಟೆಯ ಒಳಗೆ ಸ್ವೀಕರಿಸಲಾಗುವುದು.

ನಿಗಧಿತ ವೇಳೆ ಮತ್ತು ದಿನಾಂಕದ ನಂತರ ಬಂದ ಟೆಂಡರ್ ಲಕೋಟೆಗಳನ್ನು ಪರಿಗಣಿಸಲಾಗುವು ದಿಲ್ಲ. ಸ್ವೀಕರಿಸಲಾದ ಮೊಹರು ಮಾಡಿದ ಟೆಂಡರ್‌ಗಳನ್ನು ದಿನಾಂಕ:**17.11.2011**ರ ಬೆಳಿಗ್ಗೆ 11-30 ಗಂಟೆಗೆ ತೆರೆಯಲಾಗುವುದು. ಸಂಬಂಧಿತ ಲೈಸೆನ್ಸ್‌ಗಳ ಬಗ್ಗೆ ಪರಿಶೋಧನಾ ಕಾರ್ಯವನ್ನು, ನಿಬಂಧನೆ ಮತ್ತು ಷರತ್ತುಗಳನ್ನೊಳಗೊಂಡ ಟೆಂಡರ್ ನಮೂನೆ ಹಾಗೂ ಇತರೆ ಮಾಹಿತಿಗಳನ್ನು ಹಿಂತಿರುಗಿಸಲಾಗದ ಮೊತ್ತ ರೂ.1000/-ಗಳ ಡಿ.ಡಿ.ಯನ್ನು ಸಾರಿಗೆ ಆಯುಕ್ತರು, ಬೆಂಗಳೂರು ಇವರ ಹೆಸರಿನಲ್ಲಿ ಪಡೆದು ಈ ಕಛೇರಿಯ ನಗದು ಶಾಖೆಯಲ್ಲಿ ಪಾವತಿಸಿ ರಶೀದಿ ಪಡೆದು ಟೆಂಡರ್ ಅರ್ಜಿ ಮತ್ತು ದಾಖಲೆಗಳನ್ನು ದಿನಾಂಕ:**15.11.2011**ರ ಅಪರಾಹ್ನ 2-30ರೊಳಗೆ ಮಾತ್ರ ಕಛೇರಿಯ ಕೆಲಸದ ದಿನಗಳಲ್ಲಿ ಈ ಕಛೇರಿಯಿಂದ ಪಡೆದುಕೊಳ್ಳಬಹುದಾಗಿದೆ.

ಮೊಹರು ಮಾಡಿದ ಟೆಂಡರ್‌ಗಳನ್ನು ಸಾರಿಗೆ ಆಯುಕ್ತರು, 5ನೇ ಮಹಡಿ, ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಸಮಯ ಬೆಳಿಗ್ಗೆ 11-00 ರಿಂದ ಸಂಜೆ 4-00ರ ಒಳಗೆ ಕಛೇರಿಯ ಕೆಲಸದ ದಿನಗಳಲ್ಲಿ ದಿನಾಂಕ:**16.11.2011ರವರೆಗೆ** ಖುದ್ದಾಗಿ ಅಥವಾ ಅಂಚೆ ಮುಖಾಂತರ ಸಲ್ಲಿಸುವುದು.

**"ಸಾರಿಗೆ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ"**

ಸಾರಿಗೆ ಆಯುಕ್ತರ ಪರವಾಗಿ,
ಬೆಂಗಳೂರು. 15/X